# ಶ್ರೀ ಅರವಿಂದರ ದೃಷ್ಟಿಯಲ್ಲಿ ಭಗವದ್ಗೀತೆ

**ಸರಗೂರು ರಮೇಶ್**

ಭಾರತದಲ್ಲಿ ಆಧುನಿಕ ಯುಗದಲ್ಲಿ ಉದಯಿಸಿ ಬಂದ ಸಂತರಲ್ಲಿ ಒಬ್ಬರಾದ ಶ್ರೀ ಅರವಿಂದರು ಶ್ರೇಷ್ಠ ಲೇಖಕರಾಗಿದ್ದಾರೆ. ಅವರ ಕೃತಿಮಾಲೆಯಲ್ಲಿ ಬರುವ 'ಗೀತಾ ಪ್ರಬಂಧಗಳು' ಗ್ರಂಥಕ್ಕೆ ಮಹತ್ವದ ಸ್ಥಾನವಿದೆ. ತಮ್ಮ ಸ್ವತಂತ್ರ ವಿಚಾರಧಾರೆಯಿಂದಲೂ, ಆಧ್ಯಾತ್ಮಿಕ ಒಳನೋಟಗಳಿಂದಲೂ ವಿಶಿಷ್ಟವಾಗಿ ನಿಲ್ಲುವ ಶ್ರೀ ಅರವಿಂದರ ದೃಷ್ಟಿಯಲ್ಲಿ ಭಗವದ್ಗೀತೆಯ ವಿಚಾರಳ ಬಗ್ಗೆ ಬರೆದಿರುವ ಲೇಖಕರು ಮೈಸೂರು ಶ್ರೀರಾಮಕೃಷ್ಣ ವಿದ್ಯಾಶಾಲಯಲ್ಲಿ ಆಂಗ್ಲ ಉಪನ್ಯಾಸಕರು; ಅವರು ಉತ್ತಮ ಭಾಷಣಗಾರರು ಹಾಗೂ ಬರಹಗಾರರಾಗಿದ್ದಾರೆ.

ಆಧುನಿಕ ಕಾಲವು ಕಂಡ ಅಪೂರ್ವ ದಾರ್ಶನಿಕರು ಮತ್ತು ಯೋಗಿಗಳಲ್ಲಿ ಶ್ರೀ ಅರವಿಂದರೂ ಒಬ್ಬರು. ಅವರು ಮಾನವತೆಗೆ, ಮರ್ತ್ಯಪ್ರಜ್ಞೆಯ ವಿಕಾಸಕ್ಕೆ ರಚಿಸಿ ನೀಡಿರುವ ಸದ್ಗ್ರಂಥಗಳು ಮೂವತ್ತು ಸಂಪುಟಗಳಷ್ಟಿವೆ. ಅವುಗಳಲ್ಲಿ '**ಗೀತಾ ಪ್ರಬಂಧಗಳು**' ಅತ್ಯಂತ ಉತ್ಕೃಷ್ಟವಾದ ಸಾಧನಾ ಗ್ರಂಥವಾಗಿದೆ. ತತ್ತ್ವಜ್ಞಾನದ ಆಯಾಮಗಳು ಭಗವದ್ಗೀತೆಯಲ್ಲಿ ಹೇಗೆ ಪ್ರತಿಪಾದಿತವಾಗಿವೆ ಎಂಬುದನ್ನು ಅರ್ಥಮಾಡಿಕೊಳ್ಳಲು ಈ ಕೃತಿಯು ಅಪಾರ ನೆರವನ್ನು ನೀಡುತ್ತದೆ; ಆತ್ಮದ ಹಸಿವನ್ನು ತಣಿಸುತ್ತದೆ. ''ಗೀತಾ ಪ್ರಬಂಧಗಳು'' ಗ್ರಂಥದಲ್ಲಿ ಎರಡು ಮಾಲೆಗಳಿದ್ದು, ಮೊದಲನೆಯ ಮಾಲೆಯು ೨೪ ಪ್ರಬಂಧಗಳನ್ನು ಒಳಗೊಂಡಿದೆ. ಎರಡನೆಯ ಮಾಲೆಯಲ್ಲಿಯೂ ೨೪ ಪ್ರಬಂಧಗಳಿದ್ದು ಒಟ್ಟು ೪೮ ಪ್ರಬಂಧಗಳೂ ಬೇರೆ ಬೇರೆ ವಿಷಯಗಳ ಮೇಲೆ ಬೆಳಕು ಚೆಲ್ಲುತ್ತಾ, ಸಾಧಕನನ್ನು ಕೈಹಿಡಿದು ನಡೆಸುತ್ತವೆ. ಪಾಂಡಿಚೇರಿಯ ಶ್ರೀಅರವಿಂದಾಶ್ರಮದಿಂದ ಪ್ರಕಟವಾಗುತ್ತಿದ್ದ 'ಆರ್ಯ' ಎಂಬ ಮಾಸಪತ್ರಿಕೆಗೆ ೧೯೧೬ರಿಂದ ೧೯೨೦ರ ನಡುವಿನ ಅವಧಿಯಲ್ಲಿ ಬರೆದ ಪ್ರಬಂಧ ಮಾಲೆಯು ಶ್ರೀಅರವಿಂದರಿಂದಲೇ ಪರಿಷ್ಕೃತಗೊಂಡು ೧೯೨೮ರಲ್ಲಿ ಗ್ರಂಥರೂಪದಲ್ಲಿ ಪ್ರಕಟಗೊಂಡಿತು.

ವಾಸ್ತವವಾಗಿ ಶ್ರೀ ಅರವಿಂದರಿಗೆ ಗೀತೆಯ ಕೇಂದ್ರ ಸಂದೇಶವಾದ '**ವಾಸುದೇವಃ ಸರ್ವಂ ಇತಿ**'–ವಾಸುದೇವನೇ ಅಸ್ತಿತ್ವ ಸಮಸ್ತವೂ ಆಗಿರುವನು – ಎಂಬ ಅನುಭೂತಿಯು ೧೯೦೮–೧೯೦೯ರ ಅವಧಿಯಲ್ಲಿ ಆಲಿಪುರ ಸೆರೆಮನೆಯಲ್ಲಿ ಇದ್ದಾಗಲೇ ಪ್ರಾಪ್ತವಾಗಿತ್ತು. ಬಾಂಬ್ ಆಸ್ಫೋಟದ ಪ್ರಕರಣವೊಂದರಲ್ಲಿ ಬ್ರಿಟಿಷರು ಶ್ರೀ ಅರವಿಂದರನ್ನು ದಸ್ತಗಿರಿ ಮಾಡಿ, ಆಲಿಪುರ ಸೆರೆಮನೆಯಲ್ಲಿಟ್ಟು ಮೊಕದ್ದಮೆ ಹೂಡಿದ್ದರು. ಆದರೆ ಒಂದು ವರ್ಷಗಳ ಅವಧಿಯ ನ್ಯಾಯಾಲಯ ವಿಚಾರಣೆಯ ನಂತರ ದೋಷಮುಕ್ತರಾಗಿ ಶ್ರೀ ಅರವಿಂದರು ಬಿಡುಗಡೆ ಹೊಂದಿದರು. ನಂತರ ಉತ್ತರಾಪಾರ ಎಂಬ ಸ್ಥಳದಲ್ಲಿ ಅವರು ಮಾಡಿದ ಇತಿ



ಹಾಸ ಪ್ರಸಿದ್ಧವಾದ ಭಾಷಣದಲ್ಲಿ ಅವರ ಗೀತಾದರ್ಶನದ ಹೊಳಹು ನಿಚ್ಚಳವಾಗಿ ಮಿಂಚುತ್ತದೆ. ಅದರ ಕೆಲವು ಮಾತುಗಳನ್ನು ನೋಡಿದರೆ ಅವರು ಎಂತಹ ನಿರ್ಣಾಯಕವಾದ ಅನುಭವವನ್ನು ಪಡೆದಿದ್ದರು ಎಂದು ನಮಗೆ ಸ್ಪಷ್ಟವಾಗದೆ ಇರುವುದಿಲ್ಲ.

ಶ್ರೀ ಅರವಿಂದರು ಹೇಳುತ್ತಾರೆ:

''ಸೆರೆಮನೆಯು ನನಗೆ ಸೆರೆಮನೆಯಾಗಿ ಉಳಿಯಲಿಲ್ಲ. 'ವಾಸುದೇವಃ ಸರ್ವಂ' ಎಂಬ ಮಂತ್ರವನ್ನು ಜಪಿಸುತ್ತಾ ನನ್ನ ನಿತ್ಯದ ಅನುಭವದಲ್ಲಿ ಅದರ ಸಾಕ್ಷಾತ್ಕಾರವನ್ನು ಪಡೆಯಬಲ್ಲವನಾದೆ. ಸೆರೆಮನೆಯ ಗೋಡೆಗಳಿಂದ ನಾನು ಬಂಧನಕ್ಕೊಳಗಾಗಿಲ್ಲ ಎಂದೆನಿಸಿತು. ವಾಸುದೇವನೇ ನನ್ನನ್ನು ಸುತ್ತುವರಿದು ನಿಂತಿದ್ದನು. ನನ್ನ ಕೊಠಡಿಯ ಮುಂದಿದ್ದ ಮರವು ಆ ವಾಸುದೇವನೇ. ಶ್ರೀಕೃಷ್ಣನೇ ಅಲ್ಲಿ ನಿಂತು ನನ್ನ ಮೇಲೆ ನೆರಳು ಚೆಲ್ಲುತ್ತಿರುವನೆಂದು ಅರಿತೆ. ಕೋಣೆಯ ಕಬ್ಬಿಣದ ಸಲಾಕೆಗಳಲ್ಲಿ ಮತ್ತೆ ನಾನು ವಾಸುದೇವನನ್ನು ನೋಡಿದೆ. ಕಾವಲುಗಾರನಾಗಿ ನಿಂತು ವಾಸುದೇವನೇ ನನ್ನನ್ನು ಕಾಯುತ್ತಿದ್ದನು. ಸೆರೆಮನೆಯಲ್ಲಿದ್ದ ಕಳ್ಳರು, ಕೊಲೆಗಾರರು, ಮೋಸಗಾರರು ಈ ಎಲ್ಲಾ ಅಪರಾಧಿ

ಗಳನ್ನು ನೋಡಿದೆ, ನೋಡುತ್ತಿದ್ದಂತೆ ನನಗೆ ವಾಸುದೇವನೇ ಕಂಡನು. ಈ ಕತ್ತಲೆ ಕವಿದ ಆತ್ಮಗಳಲ್ಲಿ ಮತ್ತು ದುರುಪಯೋಗ ಗೊಳಿಸಿದ ದೇಹಗಳಲ್ಲಿ ನಾನು ನೋಡಿದ್ದು ನಾರಾಯಣನನ್ನೇ! ಕೋರ್ಟಿನಲ್ಲಿ ನಾನು ನ್ಯಾಯಾಧೀಶನನ್ನು ನೋಡಲಿಲ್ಲ. ವಾಸುದೇವನನ್ನೇ ನೋಡಿದೆ. ನನ್ನ ವಿರುದ್ಧ ವಾದ ಮಾಡುತ್ತಿರುವ ವಕೀಲನನ್ನು ನೋಡಿದೆ. ಅಲ್ಲಿ ಕೂತಿರುವವನು ಶ್ರೀಕೃಷ್ಣನೇ ಆಗಿದ್ದ. ''ನೀನು ಈಗ ಹೆದರುತ್ತೀಯಾ?'' ಎಂದು ಆತ ಕೇಳಿದ. ''ನಾನು ಎಲ್ಲ ಮನುಜರಲ್ಲಿ ಇದ್ದೇನೆ. ಅವರ ಮಾತು-ಮಾಟಗಳನ್ನು ನಾನು ಮೀರಿ ನಿಲ್ಲುತ್ತೇನೆ,'' ಎಂದು ವಾಸುದೇವನು ನುಡಿದನು.

ಈ ಅನುಭೂತಿಯ ಹಿನ್ನೆಲೆ, ಹಾಗೂ ಸ್ವಾನುಭವದ ಘನೀಕೃತ ಅನುಭವದ ದಾರ್ಶನಿಕತೆಯಿಂದ ಕಾಲಾನಂತರದಲ್ಲಿ ಮೂಡಿ ಬಂದ ಗ್ರಂಥವೇ 'ಗೀತಾ ಪ್ರಬಂಧಗಳು', ಇಂಗ್ಲಿಷ್ ಮೂಲದಲ್ಲಿ, ಇದು 'Essays on the Gita' ಎಂದು ಪ್ರಸಿದ್ಧವಾಗಿದೆ.

ಗೀತೆಯಿಂದ ನಾವು ಬೇಡುವುದೇನು? ನಮಗೆ ಬೇಕಾದುದೇನು?

ಶ್ರೀ ಅರವಿಂದರೇ ಗ್ರಂಥದ ಆರಂಭದಲ್ಲಿ ಈ ಪ್ರಶ್ನೆಯನ್ನು ಎತ್ತಿ ನಿಸ್ಸಂದಿಗ್ಧ ಉತ್ತರ ನೀಡುತ್ತಾರೆ. ''ನಮ್ಮ ಆಧ್ಯಾತ್ಮಿಕ ಪಯಣದಲ್ಲಿ ಒದಗಬಲ್ಲ ಸಹಾಯ-ಬೆಳಕಿಗಾಗಿ ನಮ್ಮ ಗೀತಾನುಸಂಧಾನ; ಆದ್ದರಿಂದ ಶ್ರೇಷ್ಠ ಆಧ್ಯಾತ್ಮಿಕ ಕಲ್ಯಾಣಗಳಿಗೆ ಪೋಷಕವಾಗುವ ಸಾರ ಭೂತ, ಸಜೀವ, ಸಂದೇಶವನ್ನು ಬೇರ್ಪಡಿಸುವುದು ನಮ್ಮ ಅಭ್ಯಾಸದ ಗುರಿ.'' ವೇದಾಂತದ ಪ್ರಮಾಣದ ಪ್ರಸ್ಥಾನತ್ರಯಗಳಲ್ಲಿ ಗೀತೆಯೂ ಸ್ಥಾನ ಪಡೆದಿದೆ. ಇದನ್ನು ಕಂಡ ಭಾಷ್ಯಕಾರರು ತಮ್ಮ ವಿಶಿಷ್ಟ ಪಂಥವನ್ನು ಮಂಡಿಸಿ, ಭಿನ್ನ ಪಂಥಗಳನ್ನು ಖಂಡಿಸುವ ವಾದ-ವಿವಾದದಲ್ಲಿ ಇದನ್ನು ಬಳಸುವ ಅಸ್ತ್ರವನ್ನಾಗಿ ಮಾಡಲು ಪ್ರಯತ್ನಿಸಿದರು. ಗೀತೆಯ ದಾರ್ಶನಿಕ ಭೂಮಿಕೆ ಇದಕ್ಕೆ ತೀರ ವಿರುದ್ಧವಾಗಿದ್ದು, ಸೈದ್ಧಾಂತಿಕ ದೃಷ್ಟಿಕೋನಗಳ ಬೇಲಿಯಿಂದಾಚೆಗೆ ವಿಸ್ತಾರಗೊಂಡು ವಿಶ್ವವ್ಯಾಪಕವಾಗಿದೆ. ಹೀಗಾಗಿ ಶ್ರೀಅರವಿಂದರು ಸ್ಪಷ್ಟವಾಗಿ ಉಲ್ಲೇಖಿಸುತ್ತಾರೆ:''

''ಗೀತೆಯು ವಾದ-ವಿವಾದದಲ್ಲಿ ಬಳಸಬಲ್ಲ ಅಸ್ತ್ರವಲ್ಲ; ಆಧ್ಯಾ ತ್ಮಿಕ ಸತ್ಯ-ಅನುಭೂತಿಗಳ ಅಖಂಡ ವಿಶ್ವವನ್ನು ತೆರೆದು ತೋರುವ ದ್ವಾರವಾದ ಗೀತೆಯು ಆ ಬ್ರಹ್ಮಾಂಡದಲ್ಲಿರುವ ಎಲ್ಲ ಪ್ರದೇಶಗಳ ದರ್ಶನವನ್ನು ನಮಗೆ ಮೂಡಿಸುತ್ತದೆ. ಅದು ದರ್ಶನದ ನಕ್ಷೆಯನ್ನು ರೂಪಿಸುತ್ತದೆ. ಆದರೆ ನಮ್ಮ ದೃಷ್ಟಿ, ಸಂಕುಚಿತವಾಗುವಂತೆ ಗೋಡೆ ಕಟ್ಟುವುದಿಲ್ಲ, ಬೇಲಿ ಹಾಕುವುದಿಲ್ಲ. ಬಿಡಿಯಾಗಿ ತುಂಡು -ತುಣುಕು ಮಾಡುವುದಿಲ್ಲ.

## ಗೀತೆಯ ದಾರ್ಶನಿಕತೆಯ ಸ್ವರೂಪವೇನು?

ವೇದಾಂತದ ಪ್ರಬಲ ಚೌಕಟ್ಟಿನ ಆಧಾರದಿಂದ ಏಕೈಕ ಪುರುಷನನ್ನು ಗೀತೆ ಪ್ರತಿಪಾದಿಸುತ್ತದೆ. ಅದು ಸಮಸ್ತ ಬ್ರಹ್ಮಾಂಡದ ಅಸ್ತಿತ್ವದ ಮೂಲವನ್ನು ಏಕೈಕ, ಅಕ್ಷರ, ಸನಾತನ ಪುರುಷೋತ್ತಮನಲ್ಲಿ ಕಂಡುಕೊಂಡಿದೆ. ಆದರೂ ಗೀತೆಯ ವಿಚಾರಧಾರೆ ಶುದ್ಧ ಅದ್ವೈತವಲ್ಲ.

ಪ್ರಕಟವಾಗಿರುವ ವಿಶ್ವದಲ್ಲಿ ಸರ್ವವ್ಯಾಪಿಯಾಗಿರುವ ಅಪರಾ ಪ್ರಕೃತಿಯ 'ತ್ರೈಗುಣ್ಯಮಯೀ' ಮಾಯೆಯ ಬಗ್ಗೆ ಗೀತೆ ಮಾತನಾಡಿದೆ. ಆದರೆ ಅದರ ಪ್ರಣಾಳಿಕೆ ಮಾಯಾವಾದವಲ್ಲ. ಸಾಂಪ್ರದಾಯಿಕ ನಿರೀಶ್ವರ ಸಾಂಖ್ಯದ ಏಕೈಕ ಪ್ರಕೃತಿ -ಅನೇಕ ಪುರುಷರ ಯೋಜನೆಯನ್ನು ಗೀತೆಯು ಅಂತಿಮವೆಂದು ಮನ್ನಿಸುವುದಿಲ್ಲ. ಗೀತೆಯ ಸಾಂಖ್ಯ ಮತ್ತು ಯೋಗಗಳು. ಒಂದೇ ವೇದಾಂತಿಕ ಸತ್ಯದ ಆಧಾರದಲ್ಲಿ ಸಿದ್ಧಿಯ ಅನುಭೂತಿಗೆ ಕೊಂಡೊಯ್ಯುವ ಪರಸ್ಪರ ಸಹಕಾರಿಯಾದ ಎರಡು ದಾರಿಗಳು. ಸಾಂಖ್ಯವು ತಾತ್ವಿಕ, ಬೌದ್ಧಿಕ, ವಿಶ್ಲೇಷಣಾತ್ಮಕ. ಆದರೆ ಅಂತಃಸ್ಫೂರ್ತಿಯ, ಭಕ್ತಿಯ, ಸಮನ್ವಯಾತ್ಮಕ, ಅನುಭೂತಿಯಿಂದ ಜ್ಞಾನ ಸಿದ್ಧಿಯೊದಗಿಸುವುದು ಯೋಗ, ಇವೆರಡರ ಬೋಧೆಗಳಲ್ಲಿ ಗೀತೆಯು ಯಾವ ನೈಜ ಭಿನ್ನತೆಯನ್ನೂ ಮನ್ನಿಸುವುದಿಲ್ಲ.

ಪುರುಷೋತ್ತಮನ ಪರಾಪ್ರಕೃತಿಯೇ ''ಜೀವ'' ಸ್ವರೂಪವಾಗಿ ದೇಹ ಧರಿಸಿ ಪ್ರಕೃತಿಸ್ಥವಾಗಿದೆ. ''ಜೀವ''ನು ಆ ದೇವನ ಸನಾತನ ಅಂಶವಾಗಿದ್ದಾನೆ. ಅವನು ಬ್ರಹ್ಮನಲ್ಲಿ ಪ್ರತಿಷ್ಠಿತನಾಗಿ ಬ್ರಾಹ್ಮೀಸ್ಥಿತಿಯನ್ನು ಹೊಂದಬೇಕು. ಆದರೂ ಬ್ರಹ್ಮನಿರ್ವಾಣವನ್ನು ಗೀತೆಯು ಆಧ್ಯಾತ್ಮಿಕ ಅರಿವಿನ ಶ್ರೇಷ್ಠ ಪರಮೋನ್ನತ ಅವಸ್ಥೆ ಎಂದು ಹೇಳದೆ ಪುರುಷೋತ್ತಮ ಈಶ್ವರನಲ್ಲಿ ನೆಲೆಸುವುದು ಪರಮಗಂತವ್ಯವೆಂದು ಸಾರುತ್ತದೆ. ಈ ರೀತಿ ಒತ್ತಿ ಹೇಳಿದ್ದರೂ ಗೀತೆಯ ವಿಚಾರವೇದಿಕೆ ವಿಶಿಷ್ಟಾದ್ವೈತವಲ್ಲ.

ಗೀತೆಯು ಒಂದು ಅತ್ಯುತ್ತಮ ಸಮನ್ವಯದ ಸಿದ್ಧಿಯನ್ನು ನಮ್ಮ ಮುಂದಿಡುತ್ತದೆ. ತ್ರಿವಿಧ ಶಕ್ತಿಗಳಾದ ಜ್ಞಾನ, ಕರ್ಮ, ಪ್ರೇಮ-ಭಕ್ತಿಗಳ ಸಮನ್ವಯವನ್ನು ಮೂಡಿಸುತ್ತದೆ. ಈ ದಾರಿಗಳಿಂದ ನಡೆಯುವ ಮಾನವಾತ್ಮನು ನೇರವಾಗಿ ಸಾಕ್ಷಾತ್ಕಾರ ಹೊಂದಿ ಬ್ರಹ್ಮೈಕ್ಯವನ್ನು ಪಡೆಯಬಲ್ಲನು.

ಪ್ರಾಚೀನ ಭಾರತದ ವೈದಿಕತೆಯು 'ಯಜ್ಞ'ದ ಪರಿಕಲ್ಪನೆಯನ್ನು ದೇವ-ಮಾನವರಲ್ಲಿಯ ವಿನಿಮಯ ವ್ಯವಹಾರವೆಂದು ವಿವೇಚಿಸುತ್ತದೆ. ಆದರೆ ಗೀತೆಯು ''ಯಜ್ಞ'' ಶಬ್ದಕ್ಕೆ ಕೊಟ್ಟಿರುವ ಅರ್ಥವು ಅತಿಸೂಕ್ಷ್ಮ, ತಾತ್ತ್ವಿಕ ಮತ್ತು ವಿಶ್ವವ್ಯಾಪಕ. ಕರ್ಮ, ಯಜ್ಞಗಳ ಅರ್ಥವಿಸ್ತಾರ ಮಾಡಿ, ಪರಮೇಶ್ವರನೇ ಸೃಷ್ಟಿ ಯಜ್ಞದ ಭೋಕ್ತಾರನೆಂದು ಸ್ಪಷ್ಟಪಡಿಸುತ್ತದೆ ಗೀತೆ. ಸಮಸ್ತ ಜೀವನವು ಯಜ್ಞವಾಗಿ ಉನ್ನತೀಕರಣಗೊಳ್ಳಬೇಕು. ಸಮಸ್ತ ಸೃಷ್ಟಿಯೂ ಪುರುಷೋತ್ತಮನಿಗಾಗಿ ಪ್ರಕೃತಿಶಕ್ತಿಯು ನಡೆಸುತ್ತಿರುವ ಯಜ್ಞ

ವಾಗಿದೆ, ಹೀಗೆ ಗೀತೆಯು ತತ್ತ್ವಜ್ಞಾನದ ಯಾವುದೇ ಪಂಗಡವ'ನ್ನು ನಿರಂಕುಶವಾಗಿ ಬೆಂಬಲಿಸಲು ಅಥವಾ ಯಾವುದೇ ಯೋಗ ಪ್ರಣಾಲಿಯ ಮುಖ್ಯ ಗುಣಗಳನ್ನು ಎತ್ತಿ ಹಿಡಿಯಲು ಗೀತೆಯ ರಚನೆಯಾಗಿಲ್ಲ. ಗೀತೆಯ ವಿಚಾರಧಾರೆಯ ಸಮತೋಲನವು ಸತ್ಯದ ಒಂದಂಶವನ್ನೋ, ಒಂದು ಪಾರ್ಶ್ವವನ್ನೋ ಮೂಡಿಸಿ ಉಳಿದವುಗಳನ್ನು ಖಂಡಿಸಲು ಮಂಡಿಸಿದ ಕಠೋರ ವಿಶ್ಲೇಷಕ ತಂತ್ರಕ್ಕೆ ಹೊಂದಿಕೊಳ್ಳುವುದಿಲ್ಲ. ಅದರಲ್ಲಿ ಕಾಣಬರುವುದು ವಿಶಾಲ, ಸಮನ್ವಯ ಬುದ್ಧಿಯಿಂದ ಹರಿಯುವ ಸಮೃದ್ಧ ವಿಚಾರಧಾರೆ. ಗೀತೆಯು ಬಿಡಿಯಾಗಿ ಬಿಚ್ಚಿಡದೆ, ಇಡಿಯಾಗಿ ಕೂಡಿಸಿ ಹೊಂದಾಣಿಕೆ ಮೂಡುವಂತೆ ಮಾಡುತ್ತದೆ. ಆಧುನಿಕ ಕಾಲದ ಅಗತ್ಯವಾಗಿರುವ ಸಮನ್ವಯವು ಸ್ಥಿರವಾಗಿ ಪ್ರತಿಷ್ಠಿತವಾಗಬೇಕಾದರೆ ಪ್ರಾಚೀನ ಶ್ರೇಷ್ಠ ಆಧ್ಯಾತ್ಮಿಕ ವಿಚಾರ-ಅನುಭೂತಿಗಳ ಮಹಾ ಸಂಪತ್ತನ್ನು ತನ್ನ ಆಧಾರಮಾಡಿಕೊಂಡು ಮುನ್ನಡೆಯಬೇಕಾಗಿದೆ. ಶ್ರೀ ಅರವಿಂದರ ದೃಷ್ಟಿಯಲ್ಲಿ ಈ ಆಧ್ಯಾತ್ಮಿಕ ಸಂಪತ್ತಿನ ಸಂಗ್ರಹದಲ್ಲಿ ಭಗವದ್ಗೀತೆಯ ಸ್ಥಾನವು ಅತ್ಯಂತ ಮಹತ್ವದ್ದಾಗಿದೆ.

## ಗೀತೆಯಲ್ಲಿ ವ್ಯಷ್ಟಿ-ಸಮಷ್ಟಿಗಳ ಸಮನ್ವಯ

ಗೀತೆಯು ವ್ಯಷ್ಟಿ, ಮಾನವ ಮತ್ತು ವಿಶ್ವಸತ್ಯದ ನಡುವಿನ ಸಂಬಂಧವನ್ನು ನಿರೂಪಿಸಿ ಸಮತೋಲನವನ್ನು ಏರ್ಪಡಿಸುತ್ತದೆ. ಉಪನಿಷತ್ತುಗಳ ಕಾಲಾನಂತರದಲ್ಲಿ ವ್ಯಾಪಕತೆಯನ್ನೂ ಮಹತ್ವವನ್ನು ಪಡೆದ ಜಗದ್ವಿಮುಖ ಸಂನ್ಯಾಸದ ವೈರಾಗ್ಯವು ವ್ಯಕ್ತಿಯ ಮೋಕ್ಷಕ್ಕೆ ಅತಿ ಹೆಚ್ಚಿನ ಪ್ರಾಮುಖ್ಯತೆಯನ್ನು ನೀಡಿತ್ತು. ಜಗತ್ತಿನ ಅಗತ್ಯಗಳನ್ನು ಒಂದು ರೀತಿಯಲ್ಲಿ ನಿರ್ಲಕ್ಷಿಸಿತ್ತು. ಪ್ರಪಂಚಕ್ಕೂ ಪರಮಾತ್ಮನಿಗೂ ಇರುವ ದೈವಿಕ ಸಂಬಂಧದ ಸ್ಪಷ್ಟ ಪ್ರತಿಪಾದನೆಯು ಗೌಣವಾಗಿ, ಜಗತ್ತೆಂಬುದು ಅವಿದ್ಯೆ ಮತ್ತು ಅಜ್ಞಾನದ ಕ್ಷೇತ್ರವೆಂದು ಪರಿಗಣಿಸಲ್ಪಟ್ಟಿತ್ತು. ಆದ್ದರಿಂದ ಅದು ತ್ಯಜಿಸಲು ಅರ್ಹವಾದ ಭೂಮಿಕೆ ಎಂಬ ಮನೋಭಾವವು ಮನೆಮಾಡಿತ್ತು. ಆದರೆ ಗೀತೆಯು ಜೀವನ ಮತ್ತು ಕರ್ಮಗಳ ಪರವಾದ ನಿಲುವನ್ನು ಎತ್ತಿಹಿಡಿದು ವ್ಯಷ್ಟಿ-ಸಮಷ್ಟಿ ಎಂಬ ಉಭಯ ನೆಲೆಗಳಲ್ಲಿಯೂ ಆಧ್ಯಾತ್ಮಿಕ ಅನ್ವೇಷಣೆಯು ಏಕಕಾಲಕ್ಕೆ ಮುಂದೆ ಸಾಗಲಿ ಎಂಬ ಸಂದೇಶವನ್ನು ನೀಡಿತು. ದೇಹಧಾರಿಯಾದ ಜೀವಾತ್ಮನಿಗೆ ಸಮಸ್ತ ಜೀವನ ಕರ್ಮಗಳೂ ಕರ್ಮಯೋಗವಾಗಿ ಪರಿಣಮಿಸಬೇಕು ಎಂಬುದು ಗೀತಾಚಾರ್ಯನ ನಿಲುವು. ಕರ್ಮತ್ಯಾಗಕ್ಕಿಂತಲೂ ಶರೀರವನ್ನು ಹೊಂದಿರುವ ''ದೇಹಿ'ಗೆ ಕರ್ಮಯೋಗವು ಉತ್ಕೃಷ್ಟವಾದುದೆಂದು ಗೀತೆ ಒತ್ತಿ ಹೇಳುತ್ತದೆ. ಆದ್ದರಿಂದ ವ್ಯಷ್ಟಿಜೀವನ ನಿಷ್ಕಾಮ ಕರ್ಮ, ಮನಸ್ಸು-ಆತ್ಮಗಳ ಸಮತ್ವ, ವಿಶ್ವಾತ್ಮಕ ದೃಷ್ಟಿಯನ್ನು ಬೆಳೆಸಿಕೊಂಡು ಈಶ್ವರನೊಡನೆ ''ಯುಕ್ತ''ನಾಗಬೇಕು. ಆಗ ಅವನು ಪುರುಷೋತ್ತಮನ ಕೃಪೆಯಿಂದ ಸುಲಲಿತವಾಗಿ ಅಪರಾ ಪ್ರಕೃತಿಯ ತ್ರಿಗುಣಗಳ ಬಂಧನದಿಂದ ಮುಕ್ತನಾಗಿ ಬಿಡುತ್ತಾನೆ. ಆದರೆ ಮುಕ್ತಸ್ಥಿತಿಯಲ್ಲಿಯೂ ಕೂಡ ಕರ್ಮವು ಮುಂದುವರಿಯಬಲ್ಲುದು ಮತ್ತು ಮುಂದುವರಿಯಬೇಕು ಎಂಬುದು ಗೀತೆಯ ಆಗ್ರಹವಿದ್ದಂತೆ ತೋರುತ್ತದೆ. ಆದರೆ ಬ್ರಹ್ಮ ನಿರ್ವಾಣ ಪಡೆದು ಜೀವನ್ಮುಕ್ತನಾದ ಅವಸ್ಥೆಯಲ್ಲಿ ''ಲೋಕ ಸಂಗ್ರಹ'' ಕರ್ಮವು ಘಟಿಸುತ್ತಾ ಮುಂದುವರಿಯಬಹುದಾಗಿದೆ ಎಂಬ ವಿಚಾರ ಸರಣಿಯ ಮೇಲೆ ಶ್ರೀ ಅರವಿಂದರು ಹೆಚ್ಚು ಬೆಳಕು ಚೆಲ್ಲಿ ಗೀತೆಯ ಆಶಯವನ್ನು ಸುಸ್ಪಷ್ಟಪಡಿಸುತ್ತಾರೆ. ಅಂದರೆ ಮುಕ್ತಸ್ಥಿತಿಯಲ್ಲಿ ಮುಂದುವರೆಯುವುದು ಅಹಂಕಾರ ಪ್ರೇರಿತ ವೈಯಕ್ತಿಕ ಫಲಾಸಂಧಿಯ ಕರ್ಮವಲ್ಲ; ಪುರುಷೋತ್ತಮ ಈಶ್ವರನನ್ನು ವಿಶ್ವಕಲ್ಯಾಣದ ಸಂಕಲ್ಪವನ್ನು ದೈವಾಧೀನನಾಗಿ ನೆರವೇರಿಸುವುದು ''ಮುಕ್ತಸ್ಯ ಕರ್ಮ'' ಅಥವಾ ಲೋಕ ಸಂಗ್ರಹ. ಆಗ ಸ್ವಯಂ ಪುರುಷೋತ್ತಮನೇ ಜೀವನ್ಮುಕ್ತನ ಪ್ರಕೃತಿಯಲ್ಲಿ ತನ್ನಿಚ್ಛೆಯಂತೆ ಕಾರ್ಯಗೈಯುವನು ಎಂದು ಗೀತಾಂತರ್ಗತವಾದ ಕರ್ಮಯೋಗದ ರಹಸ್ಯವನ್ನೂ, ಜೀವನ ಯಜ್ಞದ ತತ್ತ್ವವನ್ನು ಶ್ರೀ ಅರವಿಂದರು ವಿಸ್ತಾರವಾಗಿ ನಿರೂಪಿಸಿ ಕರ್ಮಯೋಗದ ವ್ಯಾಪ್ತಿಯನ್ನು ಮನದಟ್ಟು ಮಾಡಿ ಕೊಡುತ್ತಾರೆ. ವಿಶ್ವದಿಂದ ವ್ಯಷ್ಟಿ(ಜೀವಿ)ಯು ತನ್ನ ಸಂಬಂಧ ವನ್ನು ವಿಚ್ಛೇದಿಸಿಕೊಳ್ಳದೆ, ಅದರೊಂದಿಗೆ ತನ್ನ ಸಾಧನೆಯನ್ನೂ, ಸಿದ್ಧಸ್ಥಿತಿಯನ್ನೂ ಜೋಡಿಸಿಕೊಳ್ಳುತ್ತಾನೆ ಎಂಬುದು ಶ್ರೀ ಅರವಿಂದರು ಪ್ರಸ್ತುತಪಡಿಸುವ ಗೀತೆಯ ನಿಲುವಾಗಿದೆ. ಬ್ರಹ್ಮಸ್ಥ ಜೀವ ಪುರುಷನ ಪರಿಶುದ್ಧವೂ ಮುಕ್ತವೂ ಆದ ತಪಃಶಕ್ತಿಯನ್ನು ಜಗತ್ತಿನ ಕರ್ಮರಂಗದೆಡೆಗೆ ಹರಿಸುವಂತೆ ನಿರ್ದೇಶಿಸುವ ಗೀತೆಯು ಆತ್ಮಸಾಮ್ರಾಜ್ಯವನ್ನು ಕರ್ಮ ಕ್ಷೇತ್ರಕ್ಕೆ ಜೋಡಿಸಿ, ಹೊಂದಿಸಿ ಸ್ವಾತಂತ್ರ್ಯ ಮತ್ತು ಸಾಮರಸ್ಯಗಳ ಮಹೋನ್ನತ ದೈವಿಕ ಎತ್ತರಕ್ಕೆ ಒಯ್ದು ಮುಕ್ತಿಯ ಪರಿಕಲ್ಪನೆಯನ್ನು ಸಾಧಿಸುತ್ತದೆ.

ಕರ್ಮಯೋಗವು ಜ್ಞಾನಯೋಗದೊಡನೆ ಏಕರೂಪ ಹೊಂದಿ ಪುರುಷೋತ್ತಮ ಭಕ್ತಿಗೆ ಸೋಪಾನವಾಗಿಬಿಡುತ್ತದೆ. ಕರ್ಮ, ಜ್ಞಾನಗಳು ಪರಾಭಕ್ತಿಯಲ್ಲಿ ಪರಿಣಮಿಸುತ್ತವೆ.

## ಗೀತೆಯ ಪುರುಷತ್ರಯರು-ಒಂದು ವಿಶಿಷ್ಟ ಸಮಗ್ರತೆ

ಗೀತೆಯು ತನ್ನ ಸಮನ್ವಯ ದರ್ಶನದ ಕೇಂದ್ರಸ್ಥಾನದಲ್ಲಿ ತ್ರಿವಿಧ ಚೈತನ್ಯ ಅಥವಾ ತ್ರಿವಿಧ ಪುರುಷರ ಕಲ್ಪನೆಯನ್ನು ಅಳವಡಿಸಿದೆ. ಅವುಗಳನ್ನು ಕ್ಷರಪುರುಷ, ಅಕ್ಷರಪುರುಷ ಮತ್ತು ಪುರುಷೋತ್ತಮ ಅಥವಾ ಉತ್ತಮಪುರುಷ ಎಂಬುದಾಗಿ ತ್ರಿವಿಧವಾದರೂ ಒಂದೇ ಆಗಿರುವ ಪರಮಸತ್ಯ ಎಂಬ ವಿಚಾರವನ್ನು ಶ್ರೀ ಅರವಿಂದರು ಬಹು ವಿಸ್ತಾರವಾಗಿ ನಿರೂಪಿಸುತ್ತಾರೆ.

ಪ್ರಾಕೃತಿಕವಾಗಿ, ನಿರಂತರವಾಗಿ ಕಾರ್ಯನಿರತವಾದ ಚೈತನ್ಯವೇ ಕ್ಷರ ಸತ್ತೆ ಅಥವಾ ಕ್ಷರಪುರುಷ. ಇದು ಸತ್ವ, ರಜಸ್, ತಮಸ್ ಎಂದು ತ್ರಿಗುಣಾತ್ಮಿಕವಾದುದು. ಇದು ಧರಿಸುವ ಮತ್ತು ವ್ಯವಹರಿಸುವ ರೂಪಗಳು ಅಸಂಖ್ಯ

ವಾಗಿವೆ. ನಿರಂತರ ಬದಲಾವಣೆಯೇ ಕ್ಷರಪುರುಷನ ಲಕ್ಷಣ. ಕಾಲ, ಸ್ಥಳ, ಚಲನೆಗಳೆಲ್ಲಾ ಈ ಚೈತನ್ಯದ ಲಕ್ಷಣವೇ. ಚೈತನ್ಯ ದಿಂದಾದ ನಾಮರೂಪಗಳೆಲ್ಲ ಅದೇ ಆಗಿದೆ. ಕುರುಡು ರಭಸ ದಿಂದ ವ್ಯವಹರಿಸುವ ಅಪರಾ ಪ್ರಕೃತಿಯು ಕ್ಷರಪುರುಷನಲ್ಲಿ ಕಾರ್ಯ ಮಾಡುವುದು. ಸತ್ಯಸ್ವರೂಪವನ್ನು ಈ ಕ್ಷರಪುರುಷನ ಚಲನೆ ಮತ್ತು ಕ್ರಿಯೆ ಮರೆಮಾಡಿರುತ್ತದೆ. ಹೀಗೆ ಬಾಹ್ಯವಾಗಿ ವ್ಯಕ್ತವಾಗಿರುವ ಕ್ಷರಪುರುಷನ ಹಿಂದೆ ಅಡಗಿರುವ ಸತ್ಯವನ್ನು ನಾವು ಅರಿಯಬೇಕು. ಅಪರಾಪ್ರಕೃತಿಯೊಳಗಿನ ಆಸೆ-ಅಹಂ ಕಾರಗಳ ಮಗ್ನತೆ ಸತ್ಯದ ಪೂರ್ಣ ಅರಿವಿಗೆ ಬಾಧಕವಾಗಿರುತ್ತದೆ. ಈ ಪ್ರಕೃತಿಯೇ ತ್ರಿಗುಣಾತ್ಮಕವಾದ ಮಾಯೆ. ಈ ಕ್ಷರ ಪುರುಷ ನನ್ನು ಮಾತ್ರವೇ ಸ್ವತಂತ್ರವೆಂದು ಭಾವಿಸಿ ಪರಿಶೀಲಿಸಿದರೆ ನಮ್ಮ ಅಸ್ತಿತ್ವದ ರಹಸ್ಯವು ಪೂರ್ಣವಾಗುವುದೂ ಇಲ್ಲ; ಮೋಕ್ಷವು ದೊರೆಯುವುದೂ ಇಲ್ಲ. ಪೂರ್ಣಜ್ಞಾನವು ದೊರೆಯುವುದೂ ಇಲ್ಲ ಎಂಬುದನ್ನು ಗೀತೆ ಸ್ಪಷ್ಟಪಡಿಸುತ್ತದೆ.

ಆದರೆ ಈ ಕ್ಷರಪುರುಷನ ಕ್ಷರಭಾವದ ಹಿನ್ನೆಲೆಯಲ್ಲಿ ಸೃಷ್ಟಿ ಯಲ್ಲಿ ಯಾವ ವಸ್ತುಜಾತವೂ ಅಲ್ಲದ ಕೇವಲ ಆತ್ಮನಿದ್ದಾನೆ. ಈ ಪುರುಷ ಸನಾತನ, ನಿತ್ಯ, ನಿರ್ವಿಕಾರ; ಆವಿಷ್ಕಾರವು ಅವನಲ್ಲಿ ಯಾವ ಬದಲಾವಣೆಯನ್ನೂ ತರುವುದಿಲ್ಲ; ಅವನು ಎಂದಿಗೂ ಪರಿಣಮಿಸನು. ಸ್ಥಾಣುವಾಗಿದ್ದು ಅವಿಭಕ್ತನಾಗಿರುವ ಈ ಪುರುಷನು ಎಂದಿಗೂ ನಿಷ್ಕ್ರಿಯ. ಪ್ರಕೃತಿಯ ಚಲನಗತಿಯಲ್ಲಿ ಅಚಲನವನು. ಯಾವುದಕ್ಕೂ ಅಂಟಿಕೊಳ್ಳದ ಅಲಿಪ್ತ.

ಬದಲಾಗುವ ಕ್ಷರಪುರುಷನ ವ್ಯಾಪ್ತಿಯೊಳಗಿನ ಭೂತ ಗ್ರಾಮದಿಂದ ಹಿನ್ನಡಿಯಿಟ್ಟು, ಅಂತರ್ಮುಖದ ಒಲವು ಹೆಚ್ಚೆಚ್ಚು ಆಳವಾದಂತೆ ಈ ಕಾಲಾತೀತ, ಕರ್ಮಾತೀತ, ತ್ರಿಗುಣಾ ತೀತ, ಸ್ಥಲಾತೀತ ಉತ್-ಆಸೀನ ಅವ್ಯಯನ ಅರಿವೂ ಹೆಚ್ಚಾಗು ತ್ತದೆ. ಈತನೇ ಅಕ್ಷರಪುರುಷನು! ಆಕಾಶಸದೃಶವಾದ ಅಚಲ ಅಕ್ಷರ ಪುರುಷನಲ್ಲಿ ವಾಯುಸದೃಶವಾದ ಚಂಚಲ ಕ್ಷರಪುರು ಷನು ವ್ಯಾಪಕವಾಗಿ ವ್ಯವಹರಿಸುತ್ತಾನೆ.

ಪ್ರಕೃತಿಸ್ಥ ''ಜೀವ''ನು ಈ ಅವ್ಯಕ್ತ ಅಕ್ಷರಪುರುಷನನ್ನು ಹೊಂದಿದರೆ, ಅದರ ಮೇಲಿರುವ ವಿಶ್ವದ ಹಾಗೂ ಪ್ರಕೃತಿಯ ಹಿಡಿತ ಕಳಚಿ ಹೋಗುತ್ತದೆ; ಅವನು ಜನನದ ಅಗತ್ಯವನ್ನು ಮೀರಿ ಹೋಗುತ್ತಾನೆ. ಹೀಗೆ ವಿಶ್ವದಲ್ಲಿ ನಮಗೆ ಕರ್ಮಮಗ್ನ ವಾದ ಕ್ಷರಪುರುಷ ಮತ್ತು ಅವನ ಹಿಂದಿರುವ ನಿಶ್ಚಲ, ನೀರವ, ಅಕ್ಷರಪುರುಷ ಎಂಬುದಾಗಿ ಈರ್ವರು ಪುರುಷರು ಕಂಡು ಬರುತ್ತಾರೆ.

### ದ್ವಾವಿಮೌ ಪುರುಷೌ ಲೋಕೇ ಕ್ಷರಶ್ಚಾಕ್ಷರ ಏವ ಚ

ಆದರೆ ಈ ಪುರುಷರು ಪರಸ್ಪರ ವಿರುದ್ಧ ಗುಣಲಕ್ಷಣಗಳುಳ್ಳ ವರಂತೆ ಕಾಣುತ್ತಾರೆ. ಕ್ಷರಪುರುಷನ ಅನೇಕತೆಯನ್ನು ಗೀತೆ ನಿಸ್ಸಂ ದೇಹವಾಗಿ ಒಪ್ಪುತ್ತದೆ. ಅದರ ಅಂತರ್ಗತವಾದ ಅಲಿಪ್ತ ಅಕ್ಷರ ಬ್ರಹ್ಮನಲ್ಲಿ ವ್ಯಕ್ತಿಗತ ಆತ್ಮ ಅಂದರೆ ಜೀವನು ನಿರಪೇಕ್ಷ ಲಯ ಹೊಂದುವುದನ್ನು ಗೀತೆ ಎಲ್ಲಿಯೂ ಘೋಷಿಸುವುದಿಲ್ಲ ಎಂದು ಶ್ರೀ ಅರವಿಂದರು ಸೂಚಿಸುತ್ತಾರೆ. ಮಾನವ ''ಜೀವ''ನಿಗೆ ಅಮರತೆಯ ಅಭೀಪ್ಸೆಯಿದ್ದರೆ ಸತ್ಯದ ಎರಡೂ ಪಾರ್ಶ್ವಗಳನ್ನು ಅವನು ಅರಿತು ಅರಗಿಸಿಕೊಳ್ಳಬೇಕು. ಆದರೆ ಪರಮಸತ್ಯವಾದ ''ಪುರುಷೋತ್ತಮ'ನು ಕ್ಷರಪುರುಷನಿಗಿಂತ ಭಿನ್ನವೂ, ಅಕ್ಷರ ಪುರುಷನಿಗಿಂತ ಉತ್ತಮನೂ ಆಗಿದ್ದಾನೆ. ಆ ಸನಾತನ ಪುರು ಷನು ಏಕತೆಯನ್ನು ಅಕ್ಷರಪುರುಷನಾಗಿಯೂ, ಅನೇಕತೆಯನ್ನು ಕ್ಷರಪುರುಷನಾಗಿಯೂ ಎರಡು ಸ್ಥಿತಿಗಳಲ್ಲಿ ವ್ಯಕ್ತಪಡಿಸಿದ್ದಾನೆ. ಕಾಲಾತೀತ ಅಕ್ಷರಬ್ರಹ್ಮನಲ್ಲಿ ಜೀವಾತ್ಮನು ಸ್ಥಿರಗೊಂಡಾಗ ಕಾಲ, ದೇಶ, ಸನ್ನಿವೇಶಗಳು ನಮ್ಮಿಂದ ಉದುರಿಹೋಗುತ್ತವೆ. ರಹಸ್ಯದ ಕಗ್ಗಂಟನ್ನು ಕತ್ತರಿಸಿ ಈ ನಿರ್ಣಾಯಕ ಹಂತದಲ್ಲಿ ''ಬ್ರಹ್ಮಸತ್ಯಂ ಜಗತ್ ಮಿಥ್ಯಾ'' ಎಂದು ಘೋಷಿಸುತ್ತೇವೆ.

ಆದರೆ ಗೀತೆಯು ಈ ವಿವೇಚನೆಯನ್ನು ಆಶ್ರಯಿಸುವುದಿಲ್ಲ ಎಂದು ಶ್ರೀಅರವಿಂದರು ಸ್ಪಷ್ಟೀಕರಿಸುತ್ತಾರೆ. ಜಗತ್ತನ್ನು ಮಿಥ್ಯೆ ಯೆಂದು ಅನಿರ್ವಚನೀಯ ಮಾಯೆಯಿಂದ ಕರೆಯುವು ದರಿಂದ ಸಮಾಧಾನಕಾರಕ ವಿವರಣೆಯು ಪ್ರಾಪ್ತವಾಗುವು ದಿಲ್ಲ. ''ತ್ರೈಗುಣ್ಯಮಯಿ'' ಮಾಯೆಯನ್ನು ನಾವು ದಾಟಿ, ಅಕ್ಷರಬ್ರಹ್ಮನನ್ನು ಸಾಕ್ಷಾತ್ಕರಿಸಿ, ಪುರುಷೋತ್ತಮನಲ್ಲಿ ಭಕ್ತಿ ಯಿಂದ ಶರಣುಹೊಂದಿ ನೆಲೆನಿಂತಾಗ ವಿಶ್ವವು ಇಲ್ಲದಂತಾಗು ವುದಿಲ್ಲ; ಬದಲಿಗೆ ಅದರ ಅರ್ಥದ ಅಖಂಡ ಮರ್ಮವು ಬದ ಲಾಗುತ್ತದೆ ಎಂಬುದು ಗೀತೆಯ ಪರಿಕಲ್ಪನೆ. ಗೀತಾನಿರ್ಣಯ ದಂತೆ ''ಸಮಗ್ರಂ ಮಾಮ್'' ಎಂದೂ, ''ವಾಸುದೇವಃ ಸರ್ವಂ'' ಎಂದೂ ದರ್ಶಿಸುತ್ತೇವೆ. ಗೀತೆಗೆ ಜಗತ್ತು ಸತ್ಯವಾಗಿದೆ; ಪರಮೇಶ್ವರನ ಕೃತಿಯಾಗಿದೆ. ಪರಬ್ರಹ್ಮ ಪುರುಷೋತ್ತಮನಿಂದ ಮೂಡಿ ಬಂದ ಅಭಿವ್ಯಕ್ತಿಯಾಗಿದೆ. ತ್ರಿಗುಣಾತ್ಮಿಕ ಅಪರಾ ಕೃತಿಯೂ ಕೂಡಾ ಉತ್ತಮಪುರುಷನ ಪರಾಪ್ರಕೃತಿಯ ನಿಮ್ನ ಉಪಕರಣವೇ ಆಗಿದೆ.

ಆದ್ದರಿಂದ ಕರ್ಮದಿಂದ ಕಾಲಾತೀತ, ಕರ್ಮಾತೀತ, ನಿಶ್ಚಲ, ನೀರವತೆಗೆ ನಡೆದು ಹೋಗಿ ಮಹಾನ್ ಶಾಶ್ವತ ಸತ್ಯದಲ್ಲಿ ''ಲಯ'' ಹೊಂದುವುದೇ ಮೋಕ್ಷವೆಂಬುದನ್ನು ನಾವು ಒಪ್ಪ ಬೇಕಾಗಿಲ್ಲ ಎಂಬ ಅಭಿಪ್ರಾಯವನ್ನು ಗೀತೆ ಎತ್ತಿಹಿಡಿಯುತ್ತದೆ. ನಿಶ್ಚಲ ನೀರವ ಬ್ರಹ್ಮನಲ್ಲಿ ಜೀವಿಸಬೇಕು; ಪ್ರಕೃತಿಪ್ರಾಂತದಲ್ಲಿ ಸಮರ್ಥರಾಗಿ ವ್ಯವಹರಿಸಬೇಕು. ವ್ಯವಹರಿಸಬಲ್ಲೆವು ಎಂಬು ದಾಗಿ ಗೀತೆ ಆಗ್ರಹಿಸುತ್ತದೆ. ಈಶ್ವರನು ವಿಶ್ವಾತೀತ, ಸ್ವತಂತ್ರ, ಆದರೂ ಕರ್ಮದಲ್ಲಿ ನಿತ್ಯನಿರತ. ಕ್ಷರ-ಅಕ್ಷರಗಳ ಸಂಗಮ ಸ್ಥಾನವನ್ನು ಗೀತೆ ಈ ಪುರುಷೋತ್ತಮನ ಪರಮದರ್ಶದಲ್ಲಿ ಕಂಡುಕೊಂಡಿದೆ. ಇದರಿಂದಲೇ ಪೂರ್ಣಜ್ಞಾನಿಗಳು ಪರಮೋಚ್ಚ

ಅನುಭವವನ್ನು ಪಡೆದು ''ಕೃತ್ಸ್ನವಿದಃ''ರಾಗುವುದು. ಕ್ಷರ-ಅಕ್ಷರ ಸಮನ್ವಿತವಾದ ಅತೀತನೇ ಪುರುಷೋತ್ತಮನು.

ತನ್ನ ಸ್ವಯಂಭೂ ಅಸ್ತಿತ್ವದ ಸ್ವಾತಂತ್ರ್ಯದಲ್ಲಿ ಚರಾಚರದ ಅಕ್ಷರ ಆತ್ಮವಾಗಿದ್ದಾನೆ ಆ ಪುರುಷೋತ್ತಮ. ನಿಜ, ಆದರೆ ಅದೇ ಕಾಲಕ್ಕೆ ಕ್ಷರಪುರುಷನ ಪ್ರಕೃತಿ ಪ್ರಾಂತದಲ್ಲಿ ತನ್ನ ಸ್ವಂತದ ಶಕ್ತಿಯ ಕಾರ್ಯದಿಂದ ಅಪ್ರಭಾವಿತನಾಗಿದ್ದಾನೆ, ಅವಿಚಲಿತನಾಗಿದ್ದಾನೆ. ಅಕ್ಷರ ಬ್ರಹ್ಮನಾಗಿರುವಾಗಲೇ ಪುರುಷೋತ್ತಮನು ಅಕ್ಷರನಿಗಿಂತಲೂ ಶ್ರೇಷ್ಠತರನು. ಅವನ ಸತ್ತೆಯ ಶ್ರೇಷ್ಠತಮ ಸನಾತನ ಸ್ಥಿತಿಯೇ ''ಪರಂಧಾಮ''. ''ಯದ್ಗತ್ವಾ ನ ನಿವರ್ತಂತೇ ತದ್ಧಾಮ ಪರಮಂ ಮಮ'' ಅವನನ್ನು ಯಾವುದೂ ಸೀಮಿತಗೊಳಿಸಲಾರದು. ''ನೇತಿ, ನೇತಿ''ಯ ಯಾವುದೇ ನಿಷೇಧಾತ್ಮಕ ಅನಿರ್ದೇಶ್ಯ ಅವ್ಯಕ್ತ ಅಕ್ಷರಕ್ಕಿಂತಲೂ ಹಿರಿಯನಾದವನು ಪುರುಷೋತ್ತಮನು. ಅವನೇ ಗೀತಾಶಾಸ್ತ್ರದ ''ಉತ್ತಮಂ ರಹಸ್ಯಂ''! ಪ್ರತೀ ಜೀವಿಯ ಹೃದಯದಲ್ಲಿರುವ ''ಈಶ್ವರ'' ಈ ಓರ್ವನೇ! ಅವನೇ ಜೀವ-ಜಗತ್ತುಗಳ ಉಗಮಸ್ಥಾನ, ಎಲ್ಲ ಜೀವರ ತಾಯಿ-ತಂದೆ, ಆದ್ಯ ಅಧಿಷ್ಠಾನ ಮತ್ತು ನಿತ್ಯ ಆಶ್ರಯಸ್ಥಾನ. ಸಮಸ್ತ ಚರಾಚರದ ಪ್ರಭುವಾಗಿ, ಯಜ್ಞ-ತಪಸ್ಸುಗಳ ಭೋಕ್ತಾರನಾಗಿ ಸರ್ವಭೂತಗಳ ಮಹೇಶ್ವರನಾಗಿದ್ದಾನೆ.

ಈ ಪರಮಪುರುಷನನ್ನು ಅರಿತ ''ಜೀವ''ನು, ದೇಹ ಧರಿಸಿದ ''ದೇಹಿ''ಯಾಗಿ ಕ್ಷರ-ಅಕ್ಷರಗಳಲ್ಲಿ ಏಕಕಾಲಕ್ಕೆ ಅವನನ್ನು ಕಾಣುತ್ತಾನೆ. ಆ ಪರಮೇಶ್ವರನ ಸಮಗ್ರ ಜ್ಞಾನವನ್ನು ಹೊಂದುತ್ತಾನೆ. ಅಪರಾಪ್ರಕೃತಿಯ ನಾಮ-ರೂಪಗಳ ಬಂಧನದಿಂದ ಸುಲಭವಾಗಿ ಬಿಡುಗಡೆ ಹೊಂದುತ್ತಾನೆ. ಪ್ರಕೃತಿಸ್ಥ ಪುರುಷ ಕಲ್ಪಿಸಲು ಅಸಾಧ್ಯವಾದಾಗ ಬೃಹತ್‌ವಿಕಾಸ ಮತ್ತು ಅಪರಿಮಿತ ವಿಶಾಲ ಆರೋಹದಿಂದ ಪುರುಷೋತ್ತಮನಲ್ಲಿ ಜೀವಾತ್ಮನು ನೆಲೆಸಿ ವಾಸಿಸುತ್ತಾನೆ. ಇದರಲ್ಲಿ ಸಂದೇಹ ಬೇಡವೇ ಬೇಡ. ''ನಿವಸಿಷ್ಯಸಿ ಮಯ್ಯೇವ ಅತ ಊರ್ಧ್ವಂ ನ ಸಂಶಯಃ'' ಜೀವನ್ಮುಕ್ತನಿಗೆ ಲೋಕಸಂಗ್ರಹರೂಪದ ದಿವ್ಯ ಕರ್ಮಕ್ಕೆ ಆದೇಶವೀಯುವವನೂ ಆ ಪುರುಷೋತ್ತಮನೇ!

**ಉತ್ತಮಃ ಪುರುಷಸ್ತ್ವನ್ಯಃ ಪರಮಾತ್ಮೇತ್ಯುದಾಹೃತಃ ।**
**ಯೋ ಲೋಕತ್ರಯಮಾವಿಶ್ಯ ಬಿಭರ್ತ್ಯವ್ಯಯ ಈಶ್ವರಃ ॥**

''ಕ್ಷರ-ಅಕ್ಷರಗಳಿಗಿಂತ ಬೇರೆಯಾದ ಉತ್ತಮ ಪುರುಷನೊಬ್ಬನಿದ್ದಾನೆ. ಆತನನ್ನು ಪರಮಾತ್ಮನೆಂದು ಕರೆಯುತ್ತೇವೆ; ಈತನು ತ್ರಿಲೋಕಗಳಲ್ಲಿ ಸೇರಿ ಅವುಗಳ ಧಾರಣ, ಪೋಷಣ ಮಾಡುತ್ತಾನೆ. ಈತನು ಅವ್ಯಯ ಈಶ್ವರನೂ ಹೌದು.''

ವ್ಯತಿರೇಕ ಮತ್ತು ಭೇದಜನಕ ಅತಿರೇಕಗಳನ್ನು ಅಳಿಸಿಹಾಕಿ ಆಧ್ಯಾತ್ಮಿಕ ಅನುಭೂತಿಪಡೆಯಲು ಅಗತ್ಯವಾದ ಜ್ಞಾನ, ಕರ್ಮ ಮತ್ತು ಭಕ್ತಿಯ ಅಂಗಗಳನ್ನು ಸಂಯೋಜಿಸಿ ಪರಮಪೂರ್ಣತೆಗೆ ಹೆದ್ದಾರಿಯನ್ನು ಹಾಕಿಕೊಡುವುದೇ ಗೀತೆಯ ಉದ್ದೇಶವಾಗಿದೆ ಎಂಬುದಾಗಿ ಶಾಸ್ತ್ರಸಾರವನ್ನು ಶ್ರೀ ಅರವಿಂದರು ಪ್ರಸ್ತುತಪಡಿಸಿದ್ದಾರೆ.

### ಮಾನವಾತ್ಮನಿಗೆ ಗೀತೆಯ ಸಂದೇಶ

ಮಾನವನ ಆಧ್ಯಾತ್ಮಿಕ ವ್ಯಕ್ತಿಸ್ವರೂಪ, ಅಂದರೆ ಪ್ರಕೃತಿಸ್ಥ ಪುರುಷ, ನಮ್ಮಲ್ಲಿನ ಸನಾತನ ''ಜೀವ'' ನು ಸನಾತನ ದೇವನಾದ ಪುರುಷನಿಗೆ ತನ್ನನ್ನು ತನ್ನ ಸರ್ವಸ್ವವನ್ನೂ ಅರ್ಪಿಸಿಕೊಳ್ಳಬೇಕು. ತಾನು ಯಾವ ಪರಮೇಶ್ವರನ ಅಂಶವಾಗಿರುವನೋ, ಆತನಿಗಾಗಿ ತನ್ನ ಬದುಕನ್ನು ಯಜ್ಞವಾಗಿ ಪರಿವರ್ತಿಸಬೇಕು. ಮರ್ತ್ಯಜೀವನದಲ್ಲಿ ಆರೋಪಿತವಾದ ಮತ್ತು ಸಂಕಲ್ಪಿತವಾದ ಸರ್ವಧರ್ಮಗಳನ್ನೂ ಪರಿತ್ಯಜಿಸಿ, ಏಕಮಾತ್ರ ಪುರುಷೋತ್ತಮನಿಗೆ ಶರಣಾಗತನಾಗಬೇಕು ಈ ಸಮರ್ಪಣಾ ಮಾರ್ಗದಲ್ಲಿ ಅವನ ಯಾವ ಪ್ರಯತ್ನವೂ ನಿಷ್ಫಲವಾಗುವುದಿಲ್ಲ; ಆತ್ಮದ ಆರೋಹಣದಲ್ಲಿ ಯಾವ ಹೆಜ್ಜೆಯೂ ನಿರರ್ಥಕವಾಗುವುದಿಲ್ಲ. ಇದರಿಂದ ಅವನ ಕರ್ಮಗಳ ಯಜ್ಞವು ಅರ್ಪಿತವಾಗಿ ಪೂರ್ಣ ಸಾರ್ಥಕ ಹೊಂದುತ್ತದೆ. ಜೀವಾತ್ಮನು ಅಪರಾ ಪ್ರಕೃತಿಯ ತ್ರಿಗುಣಗಳನ್ನು ಮೀರಿ ಮೇಲೇರಿ ಬ್ರಹ್ಮಸ್ಥನಾಗುತ್ತಾನೆ. ನಿಸ್ತ್ರೈಗುಣ್ಯನಾಗುತ್ತಾನೆ. ಆದರೆ ಲಯ ಹೊಂದದೆ, ಪರಮೇಶ್ವರನ ಮೇಲಿನ ಪರಾಭಕ್ತಿಯಿಂದ ಶಾಶ್ವತವಾಗಿ ಪುರುಷೋತ್ತಮನಲ್ಲಿ ನೆಲೆಸುತ್ತಾನೆ. ಲೋಕರಂಗದಲ್ಲಿ ಪರಮಪುರುಷನ ಇಚ್ಛೆಯನ್ನು ನೆರವೇರಿಸುವ ಪ್ರಕಾಶಕೇಂದ್ರವಾಗುತ್ತಾನೆ. ಕೃತಕೃತ್ಯನಾಗುತ್ತಾನೆ. ಪುರುಷೋತ್ತಮನೊಡನೆ ಒಂದಾದ ಅವನು ಈಶ್ವರ ಸ್ವರೂಪಿಯೇ ಆಗುತ್ತಾನೆ. ''ವಾಸುದೇವಃ ಸರ್ವಂ ಇತಿ'' ಎಂಬುದೇ ಅವನ ಸಹಜವೂ, ನಿತ್ಯವೂ ಆದ ದರ್ಶನವಾಗಿ ಬಿಡುತ್ತದೆ. ಇದೇ ದಿವ್ಯಕರ್ಮ, ದಿವ್ಯಜ್ಞನ ಮತ್ತು ದಿವ್ಯಪ್ರೇಮಗಳ ಪರಮೋಚ್ಚ ಸಂಗಮಸ್ಥಾನ. ಈ ಜ್ಞಾನಭಕ್ತನ ಪ್ರಕೃತಿಯು ದಿವ್ಯಪ್ರಕೃತಿಯಾಗಿ ಪರಿಣಮಿಸುತ್ತದೆ. ಇದೇ ಈ ಜಗತ್ತಿನಲ್ಲಿ ಮಾನವಾತ್ಮನು ಪಡೆಯುವ ಪರಮಸಿದ್ಧಿ. ಜನ್ಮಜನ್ಮಾಂತರಗಳ ಚಕ್ರದಿಂದ, ಮರಣದ ಭಯದಿಂದ ಮುಕ್ತನ ಪರಮಪದದಲ್ಲಿ ನಿತ್ಯ ನಿವಾಸಿಯಾಗುವನು. ಇದೇ ಪ್ರಕೃತಿಯ ಸಮಗ್ರ ಶರಣಾಗತಿ. ಈ ಅಭೀಪ್ಸೆ, ಈ ಶ್ರದ್ಧೆ, ಈ ಶರಣಾಗತಿಯನ್ನು ಜೀವನು ಪಡೆದಿದ್ದಾದರೆ ಅವನ ದಾರಿ ಸುನಿಶ್ಚಿತ; ಅವನ ಸಿದ್ಧಿ ಸುನಿಶ್ಚಿತ; ಇದೇ ''ರಹಸ್ಯಂ ಉತ್ತಮಂ'' ಎನಿಸುವ ಗೀತೆಯ ಪರಮ ವಚನ. ಸರ್ವ ಜೀವಾತ್ಮರಿಗೆ ಸೌಲಭ್ಯವಾಗಿ ಗೀತೆಯು ತೆರೆದಿರುವ, ಉತ್ತರೋತ್ತರವಾಗಿ ಸಾಧಿಸಬಲ್ಲ ಆಂತರಿಕ ಸಾಧನೆಯಿದು ಎಂಬ ಗೀತೆಯ ಸಂದೇಶದ ಸ್ವರೂಪವನ್ನು ಶ್ರೀ ಅರವಿಂದರು ಬಹಳ ವಿಸ್ತಾರವಾಗಿ, ಕೂಲಂಕಷವಾಗಿ ವಿವೇಚಿಸಿ ನಿರೂಪಿಸಿದ್ದಾರೆ.